ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 142/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜ್ಞಾನಶೇಖರ | ಚಾಸಾಃ 01 |
| ತಂದೆಯ ಹೆಸರು | : | ಸುಬ್ರಮಣ್ಯ | ಫಿರ್ಯಾದಿ ಸಾಕ್ಷಿ |
| ಪ್ರಾಯ | : | 57 ವರ್ಷ | ದಿನಾಂಕಃ 09.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿ.ಎಸ್.ಐ., ಪಣಂಬೂರು ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

## ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು 2023 ರಿಂದ ಇಲ್ಲಿಯವರೆಗೂ ಪಣಂಬೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2. ದಿನಾಂಕ 23.03.2025 ರಂದು ಸಂಜೆ 7 ಗಂಟೆಗೆ ಠಾಣೆಯಲ್ಲಿರುವ ಬಾತ್ಮಿದಾರರು ಕರೆ ಮಾಡಿ ಪಣಂಬೂರು ಎನ್.ಎಂ.ಪಿ.ಎ. ಹಳೆ ಟ್ರಕ್ ಯಾರ್ಡ್ ನಲ್ಲಿ ಒಂದು ಕಾರ್ ನಿಲ್ಲಿಸಿಕೊಂಡು ಅದರಲ್ಲಿ ಇಬ್ಬರು ವ್ಯಕ್ತಿಗಳು ಕುಳಿತುಕೊಂಡು ಮಾದಕ ವಸ್ತುಗಳನ್ನು ಮಾರಾಟಕ್ಕಾಗಿ ತಂದಿರುವುದಾಗಿ ಮಾಹಿತಿಯನ್ನು ನೀಡಿದ್ದು ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಸದರಿ ಠಾಣಾ ದಿನಚರಿಯನ್ನು ನೋಡುತ್ತಿದ್ದು ಅದನ್ನು ನಿಪಿ–21 ಎಂದು ಗುರುತಿಸಲಾಯಿತು.

3. ಬಂದ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ದಾಳಿ ಮಾಡಲು ಅನುಮತಿಯನ್ನು ಕೋರಿ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–22 ಎಂದು, ಸಾಕ್ಷಿ ಸಹಿಯನ್ನು ನಿಪಿ–22(ಎ) ಎಂದು ಗುರುತಿಸಲಾಯಿತು.

4. ದಾಳಿ ನಡೆಸಲು ಮೇಲಾಧಿಕಾರಿಗಳು ನನಗೆ ಅನುಮತಿ ಪತ್ರವನ್ನು ಕೊಟ್ಟಿರುತ್ತಾರೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–23 ಎಂದು, ಸಾಕ್ಷಿಯ ಸ್ವೀಕೃತಿಯ ಸಹಿಯನ್ನು ನಿಪಿ–23(ಎ) ಎಂದು ಗುರುತಿಸಲಾಯಿತು.

5. ನಂತರ ಚಾಸಾ–8 ರವರ ಮುಖಾಂತರ ಇಬ್ಬರು ಪಂಚರಾದ ಚಾಸಾ–2 ಮತ್ತು 3 ರವರನ್ನು ಠಾಣೆಗೆ ಕರೆಸಿಕೊಂಡು ದಾಳಿಯ ಕುರಿತು ಮಾಹಿತಿ ನೀಡಿ ಪಂಚರಾಗುವಂತೆ ನೋಟೀಸನ್ನು ಕೊಟ್ಟಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ನಿಪಿ–24 ಎಂದು ಗುರುತಿಸಲಾಯಿತು. ಚಾಸಾ–2 ರವರ ಸಹಿಯನ್ನು ನಿಪಿ–24(ಎ) ಎಂದು ಮತ್ತು ಚಾಸಾ–3 ರವರ ಸಹಿಯನ್ನು ನಿಪಿ–24(ಬಿ) ಎಂದು ಗುರುತಿಸಲಾಯಿತು.

6. ದಾಳಿ ನಡೆಸುವ ಬಗ್ಗೆ ಚಾಸಾ–2, 3, 6 ರಿಂದ 9 ಮತ್ತು 29 ರವರನ್ನು ಕರೆದುಕೊಂಡು ಪರಿಕರಗಳೊಂದಿಗೆ ಠಾಣೆಯನ್ನು ಸಂಜೆ 7.30 ಕ್ಕೆ ಬಿಟ್ಟು ಇಲಾಖಾ ವಾಹನದಲ್ಲಿ ಎನ್.ಎಂ.ಪಿ.ಎ. ಹಳೆ ಟ್ರಕ್ ಯಾರ್ಡ್ ಗೆ ಹೋಗಿದ್ದು ಅಲ್ಲಿ ಕೆಎ–18–ಎಂ.ಬಿ.–9898 ನಂಬರ್ ನ ಪೋಕ್ಸ್ ವ್ಯಾಗನ್ ಕಾರು ಇದ್ದು ಅದರ ಚಾಲಕನ ಸೀಟಿನಲ್ಲಿ ನ್ಯಾಯಾಲಯದ ವಿ.ಸಿ. ಯಲ್ಲಿ ಕಾಣಿಸುವ 1 ನೇ ಆರೋಪಿಯು ಮತ್ತು ಅದರ ಪಕ್ಕದ ಸೀಟಿನಲ್ಲಿ ನ್ಯಾಯಾಲಯದ ವಿ.ಸಿ. ಯಲ್ಲಿ ಕಾಣಿಸುವ 2 ನೇ ಆರೋಪಿಯು ಕುಳಿತ್ತಿದ್ದರು.

7. ನಮ್ಮನ್ನು ನೋಡಿದ ಕೂಡಲೇ ಕಾರಿನ ಮುಂದಿನ ಬಾಗಿಲುಗಳನ್ನು ತೆಗೆಯುತ್ತಿರುವಾಗ ಚಾಸಾ–6, 7 ಮತ್ತು 9 ರವರು ಓಡಿ ಹೋಗಿ ಅವರುಗಳು ಬಾಗಿಲನ್ನು ತೆರೆಯದಂತೆ ತಡೆದಿರುತ್ತಾರೆ. ನಂತರ ನಾನು ಸದರಿ ಕಾರಿನ ಬಳಿ ಹೋಗಿ 1 ಮತ್ತು 2 ನೇ ಆರೋಪಿತರನ್ನು ಕೆಳಗೆ ಇಳಿಯುವಂತೆ ತಿಳಿಸಿದ್ದು ಅವರು ಕಾರಿನಿಂದ ಇಳಿದಿದ್ದು ಅವರನ್ನು ವಿಚಾರಿಸಿದಾಗ ತಡವಡಿಸಿರುತ್ತಾರೆ ಮತ್ತು ಪುನಃ ಪುನಃ ವಿಚಾರಿಸಿದಾಗ ತಮ್ಮ ಬಳಿ ಮಾದಕ ವಸ್ತು ಇದೆ ಮತ್ತು ಅದನ್ನು ಮಾರಾಟ ಮಾಡಲು ಬಂದಿರುವುದಾಗಿ ಹೇಳಿರುತ್ತಾರೆ.

8. ನಂತರ ಯಾವುದೆಲ್ಲಾ ಮಾದಕ ವಸ್ತು ಇದೆ ಎಂದು ಕೇಳಿದಾಗ 1 ನೇ ಆರೋಪಿಯು ತನ್ನ ಬಳಿ 8 ಗ್ರಾಂ ಎಂ.ಡಿ.ಎಂ.ಎ. ಪಿಲ್ಸ್ ಇರುವುದಾಗಿಯೂ ಮತ್ತು 2 ನೇ ಆರೋಪಿಯು ತನ್ನ ಬಳಿ 5 ಗ್ರಾಂ ಎಂ.ಡಿ.ಎಂ.ಎ. ಪಿಲ್ಸ್ ಇರುವುದಾಗಿಯೂ ಮತ್ತು

ಹಾಗೆಯೇ ಕಾರಿನ ಒಳಗಡೆ 5 ಗ್ರಾಂ ಎಂ.ಡಿ.ಎಂ.ಎ. ಪಿಲ್ಸ್ 0.90 ಗ್ರಾಂ ಹೈಡೋವಿಡ್ ಗಾಂಜಾ, 352 ಗ್ರಾಂ ಗಾಂಜಾದ ಪ್ಯಾಕೆಟ್, 172 ಗ್ರಾಂ ಗಾಂಜಾದ ಪ್ಯಾಕೆಟ್ ಮತ್ತು 25 ಗ್ರಾಂ ನ ಗಾಂಜಾದ ಪ್ಯಾಕೆಟ್ ಇರುವುದಾಗಿ ಹೇಳಿರುತ್ತಾರೆ.

9. ಈ ಬಗ್ಗೆ ಸ್ಥಳದಲ್ಲಿ ದೂರನ್ನು ತಯಾರಿಸಿಕೊಂಡು ಚಾಸಾ–30 ರವರನ್ನು ಸ್ಥಳಕ್ಕೆ ಕರೆಸಿಕೊಂಡು ಅವರ ಮೂಲಕ ಪ್ರಕರಣವನ್ನು ದಾಖಲಿಸಲು ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–25 ಎಂದು, ಸಾಕ್ಷಿಯ ಸಹಿಯನ್ನು ನಿಪಿ–25(ಎ) ಎಂದು ಗುರುತಿಸಲಾಯಿತು.

10. ನಂತರ ಆರೋಪಿಯ ಅಂಗಶೋಧನೆ ಬಗ್ಗೆ ಕಲಂ 50 ರಡಿಯಲ್ಲಿ ನೋಟೀಸುಗಳನ್ನು ಜಾರಿ ಮಾಡಿರುತ್ತೇನೆ. ಅವುಗಳಲ್ಲಿಯೇ ಆರೋಪಿತರು ತಮ್ಮನ್ನು ಪತ್ರಾಂಕಿತ ಅಧಿಕಾರಿಯು ಅಂಗಶೋಧನೆ ಮಾಡಬಹುದು ಎಂದು ಬರೆದು ಸಹಿ ಮಾಡಿರುತ್ತಾರೆ. ಸದರಿ ನೋಟೀಸುಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–26 ಮತ್ತು 27 ಎಂದು ಗುರುತಿಸಲಾಯಿತು. ನಿಪಿ–26 ರ ಮೇಲೆ ಇರುವ 1 ನೇ ಆರೋಪಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ–26(ಎ) ಎಂದು, ಸಾಕ್ಷಿ ಸಹಿಯನ್ನು ನಿಪಿ–26(ಬಿ) ಎಂದು ಗುರುತಿಸಲಾಯಿತು. ನಿಪಿ–27 ರ ಮೇಲೆ ಇರುವ 2 ನೇ ಆರೋಪಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ–27(ಎ) ಎಂದು, ಸಾಕ್ಷಿ ಸಹಿಯನ್ನು ನಿಪಿ–27(ಬಿ) ಎಂದು ಗುರುತಿಸಲಾಯಿತು.

11. ನಂತರ ಪತ್ರಾಂಕಿತ ಅಧಿಕಾರಿಯವರು ಚಾಸಾ–14 ರವರಿಗೆ ಸ್ಥಳಕ್ಕೆ ಬಂದು ಆರೋಪಿತರ ಅಂಗಶೋಧನೆ ಮಾಡಬೇಕೆಂದು ಫೋನ್ ಮೂಲಕ ವಿನಂತಿಸಿಕೊಂಡಿರುತ್ತೇನೆ. ಆ ಪ್ರಕಾರ ಚಾಸಾ–14 ರವರು ಸ್ಥಳಕ್ಕೆ ರಾತ್ರಿ 8.15 ಗಂಟೆಗೆ ಬಂದಿರುತ್ತಾರೆ. ಆಗ ನಾನು ಚಾಸಾ–14 ರವರಿಗೆ ಆರೋಪಿತರ ಅಂಗಶೋಧನೆಗಾಗಿ ವಿನಂತಿ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ವಿನಂತಿ ಪತ್ರವನ್ನು ನಿಪಿ–28 ಎಂದು, ಸಾಕ್ಷಿ ಸಹಿಯನ್ನು ನಿಪಿ–28(ಎ) ಎಂದು ಗುರುತಿಸಲಾಯಿತು.

12. ನಂತರ ಚಾಸಾ–31 ರವರು ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ಕೊಟ್ಟು

ಪ್ರಕರಣದ ಕ್ರೈಮ್ ನಂಬರ್ ನ್ನು ತಿಳಿಸಿರುತ್ತಾರೆ.

13. ನಂತರ ಚಾಸಾ–14 ರವರು ಆರೋಪಿಗಳಿಗೆ ತಮ್ಮ ಪರಿಚಯ ಮಾಡಿಕೊಂಡಿದ್ದು ಆಗ ಆರೋಪಿತರು ತಮ್ಮ ಅಂಗಶೋಧನೆಯನ್ನು ಚಾಸಾ–14 ರವರು ಮಾಡಬಹುದು ಎಂದು ಹೇಳಿರುತ್ತಾರೆ. ಆಗ ನಾನು, ಚಾಸಾ–2, 3, 6 ರಿಂದ 9, 29 ಮತ್ತು ಚಾಸಾ–14 ರವರು ನಮ್ಮ ನಮ್ಮ ಅಂಗಶೋಧನೆ ಮಾಡಿಕೊಂಡು ಮಾದಕ ವಸ್ತು ಇರದೇ ಇರುವ ಬಗ್ಗೆ ಖಚಿತಪಡಿಸಿಕೊಂಡಿರುತ್ತೇವೆ.

14. ನಂತರ ಚಾಸಾ–14 ರವರು 1 ನೇ ಆರೋಪಿಯನ್ನು ಅಂಗಶೋಧನೆಗೆ ಒಳಪಡಿಸಿದಾಗ ಆತನ ಪ್ಯಾಂಟ್ ನ ಬಲ ಕಿಸೆಯಲ್ಲಿ ಎರಡು ಎಂ.ಡಿ.ಎಂ.ಎ. ಪಿಲ್ಸ್ ಇರುವ ಪ್ಲಾಸ್ಟಿಕ್ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ. ಅವುಗಳ ಪೈಕಿಯ ಒಂದನೇ ಪ್ಯಾಕೆಟ್ ನಲ್ಲಿ 6 ಎಂ.ಡಿ.ಎಂ.ಎ. ಪಿಲ್ಸ್ ಇದ್ದು ಅವುಗಳಲ್ಲಿ ಮೂರು ಹಳದಿ ಮತ್ತು ಮೂರು ನೀಲಿ ಬಣ್ಣದ್ದಾಗಿದ್ದವು. ಅವುಗಳನ್ನು ಡಿಜಿಟಲ್ ತೂಕ ಮಾಪನದ ಮೂಲಕ ತೂಕ ಮಾಡಿದಾಗ ಅವುಗಳು 3.00 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.1 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು 1 ನೇ ಆರೋಪಿಯು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ.

15. 2 ನೇ ಪ್ಯಾಕೆಟ್ ನಲ್ಲಿ 17 ಹಳದಿ ಬಣ್ಣದ ಎಂ.ಡಿ.ಎಂ.ಎ. ಪಿಲ್ಸ್ ಇದ್ದು ಅವುಗಳನ್ನು ತೂಕ ಮಾಡಲಾಗಿ 5 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.2 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು 1 ನೇ ಆರೋಪಿಯು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು

ಈಗಾಗಲೇ ಮುದ್ದೆ ಮಾಲು 2 ಎಂದು ಗುರುತಿಸಲಾಗಿದೆ.

16. ನಂತರ ಚಾಸಾ–14 ರವರು 2 ನೇ ಆರೋಪಿಯನ್ನು ಅಂಗಶೋಧನೆಗೆ ಒಳಪಡಿಸಿದಾಗ ಆತನ ಪ್ಯಾಂಟ್ ನ ಬಲ ಕಿಸೆಯಲ್ಲಿ ಎರಡು ಎಂ.ಡಿ.ಎಂ.ಎ. ಪಿಲ್ಸ್ ಇರುವ ಪ್ಲಾಸ್ಟಿಕ್ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ. ಅವುಗಳಲ್ಲಿ 1 ನೇ ಪ್ಯಾಕೆಟ್ ನ್ನು ತೆಗೆದು ನೋಡಿದಾಗ ಅದರಲ್ಲಿ ಪಿಂಕ್ ಬಣ್ಣದ 8 ಎಂ.ಡಿ.ಎಂ.ಎ. ಪಿಲ್ಸ್ ಗಳು ಇದ್ದು ಅವುಗಳನ್ನು ಡಿಜಿಟಲ್ ತೂಕ ಮಾಪನದ ಮೂಲಕ ತೂಕ ಮಾಡಿದಾಗ ಅವುಗಳು 3.00 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೊಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.3 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು 2 ನೇ ಆರೋಪಿಯು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 3 ಎಂದು ಗುರುತಿಸಲಾಗಿದೆ.

17. ಅವುಗಳಲ್ಲಿ 2 ನೇ ಪ್ಯಾಕೆಟ್ ನ್ನು ತೆಗೆದು ನೋಡಿದಾಗ ಅದರಲ್ಲಿ ಪಿಂಕ್ ಬಣ್ಣದ 2 ಎಂ.ಡಿ.ಎಂ.ಎ. ಪಿಲ್ಸ್ ಗಳು, ಗ್ರೇ ಬಣ್ಣದ ಒಂದು ಎಂ.ಡಿ.ಎಂ.ಎ. ಪಿಲ್ಸ್ ಮತ್ತು ಕ್ರೀಮ್ ಬಣ್ಣದ 1.5 ಎಂ.ಡಿ.ಎಂ.ಎ. ಪಿಲ್ಸ್ ಇದ್ದು ಅವುಗಳನ್ನು ಡಿಜಿಟಲ್ ತೂಕ ಮಾಪನದ ಮೂಲಕ ತೂಕ ಮಾಡಿದಾಗ ಅವುಗಳು 2.00 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೊಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.4 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು 2 ನೇ ಆರೋಪಿಯು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 4 ಎಂದು ಗುರುತಿಸಲಾಗಿದೆ.

18. ಆ ನಂತರ ಚಾಸಾ–14 ರವರು ಆರೋಪಿತರನ್ನು ವಿಚಾರಿಸಲಾಗಿ ಕಾರಿನ ಒಳಗೆ ಗಾಂಜಾ, ಹೈಡ್ರೋವಿಡ್ ಗಾಂಜಾ, ಕ್ರಿಸ್ಟಲ್ ಎಂ.ಡಿ.ಎಂ.ಎ. ಇರುವುದಾಗಿ ತಿಳಿಸಿದಂತೆ ಪರಿಶೀಲಿಸಲಾಗಿ ಕಾರಿನ ಡ್ಯಾಶ್ ಬಾಕ್ಸ್ ನಲ್ಲಿ ಒಂದು ಪ್ಲಾಸ್ಟಿಕ್ ನ ಚಿಕ್ಕ ಬಾಕ್ಸ್ ಇದ್ದು

ಅದರೊಂದಿಗೆ ಪ್ಲಾಸ್ಟಿಕ್ ಕವರ್ ಇದ್ದು ಅದನ್ನು ತೆಗೆದು ಪರಿಶೀಲಿಸಲಾಗಿ ಅದರಲ್ಲಿ ಚಿಕ್ಕ ಚಿಕ್ಕ 4 ಕ್ರಿಸ್ಟಲ್ ಎಂ.ಡಿ.ಎಂ.ಎ. ಪ್ಯಾಕೆಟ್ ಗಳು ಇದ್ದು ಇವುಗಳು ಎಲ್ಲಾವನ್ನು ಒಟ್ಟಿಗೆ ಡಿಜಿಟಲ್ ತೂಕ ಮಾಪನದ ಮೂಲಕ ತೂಕ ಮಾಡಿದಾಗ ಅವುಗಳು 5.00 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೊಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.5 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 5 ಎಂದು ಗುರುತಿಸಲಾಗಿದೆ.

19. ನಂತರ ಪ್ಲಾಸ್ಟಿಕ್ ನ ಚಿಕ್ಕ ಬಾಕ್ಸ್ ನ್ನು ತೆರೆದು ನೋಡಲಾಗಿ ಅದರಲ್ಲಿ ಹೈಡ್ರೋವಿಡ್ ಗಾಂಜಾವಿದ್ದು ಇದನ್ನು ಡಿಜಿಟಲ್ ತೂಕ ಮಾಪನದ ಮೂಲಕ ತೂಕ ಮಾಡಿದಾಗ ಅವುಗಳು 0.90 ಗ್ರಾಂ ತೂಕದ್ದಾಗಿದ್ದವು. ಅವುಗಳನ್ನು ಕ್ಲಾತ್ ಮೊಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.6 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರು ಸಹಿ ಮಾಡಿರುತ್ತೇವೆ. ಸದರಿ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 6 ಎಂದು ಗುರುತಿಸಲಾಗಿದೆ.

20. ಹೈಡ್ರೋವಿಡ್ ಗಾಂಜಾ ಇಟ್ಟಿದ್ದ ಪ್ಲಾಸ್ಟಿಕ್ ಬಾಕ್ಸ್ ನ್ನು ಮುಂದಿನ ಕ್ರಮವಾಗಿ ವಶಕ್ಕೆ ಪಡೆದು ಅದನ್ನು envelope ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.7 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರು ಸಹಿ ಮಾಡಿರುತ್ತೇವೆ. (ಈ ಹಂತದಲ್ಲಿ ಸೀಲು ಮಾಡಿದ ಕಾಗದ ಕವರ್ ನ್ನು ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ಖಾಲಿ ಪ್ಲಾಸ್ಟಿಕ್ ಬಾಕ್ಸ್ ಇದ್ದು ಅದನ್ನು ಸಾಕ್ಷಿ ಗುರುತಿಸಿರುತ್ತಾರೆ). ಸದರಿ ಖಾಲಿ ಪ್ಲಾಸ್ಟಿಕ್ ಬಾಕ್ಸ್ ನ್ನು ನೋಡುತ್ತಿದ್ದು ಅದನ್ನು ಈಗ

ಮುದ್ದೆ ಮಾಲು 10 ಎಂದು ಗುರುತಿಸಲಾಯಿತು. ಕಾಗದ ಕವರ್ ಗೆ ಒಂದು ಕಡೆಗೆ ಕ್ಯೂ.ಆರ್. ಕೋಡ್ ಇದ್ದು ಅದಕ್ಕೆ ನನ್ನ, ಪಂಚರ ಮತ್ತು ಆರೋಪಿತರ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಅದನ್ನು ನಿಪಿ–29 ಎಂದು ಗುರುತಿಸಲಾಯಿತು. ಸದರಿ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–29(ಎ) ಎಂದು, ಚಾಸಾ–2 ರವರ ಸಹಿಯನ್ನು ನಿಪಿ–29(ಬಿ) ಎಂದು, ಚಾಸಾ–3 ರವರ ಸಹಿಯನ್ನು ನಿಪಿ–29(ಸಿ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ–29(ಡಿ) ಎಂದು ಮತ್ತು 2 ನೇ ಆರೋಪಿಯನ್ನು ಸಹಿಯನ್ನು ನಿಪಿ–29(ಇ) ಎಂದು ಗುರುತಿಸಲಾಯಿತು.

21. ನಂತರ ಚಾಸಾ–14 ರವರು ಕಾರಿನ ಮುಂದುಗಡೆಯ ಚಾಲಕನ ಬದಿಯ ಸೀಟಿನಲ್ಲಿ ನೋಡಲಾಗಿ 3 ಪ್ಯಾಕೆಟ್ ಗಳು ಇದ್ದು ಅವುಗಳ ಪೈಕಿ 1 ನೇ ಪ್ಯಾಕೆಟ್ ನ್ನು ತೆಗೆದು ನೋಡಲಾಗಿ ಹೂವು, ಎಲೆ, ಕಾಂಡ ಇರುವ ಗಾಂಜಾ ಮಾದಕ ವಸ್ತು ಕಂಡು ಬಂದಿದ್ದು ಸದರಿ ಪ್ಯಾಕೆಟ್ ನ್ನು ತೂಕ ಮಾಡಲಾಗಿ 352 ಗ್ರಾಂ ತೂಕದ್ದಾಗಿರುತ್ತದೆ. ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.8 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರ ಸಹಿ ಮಾಡಿರುತ್ತೇವೆ. ಸದರಿ ಗಾಂಜಾ ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 7 ಎಂದು ಗುರುತಿಸಲಾಗಿದೆ.

22. ಅವುಗಳ ಪೈಕಿ 2 ನೇ ಪ್ಯಾಕೆಟ್ ನ್ನು ತೆಗೆದು ನೋಡಲಾಗಿ ಹೂವು, ಎಲೆ, ಕಾಂಡ ಇರುವ ಗಾಂಜಾ ಮಾದಕ ವಸ್ತು ಕಂಡು ಬಂದಿದ್ದು ಸದರಿ ಪ್ಯಾಕೆಟ್ ನ್ನು ತೂಕ ಮಾಡಲಾಗಿ 172 ಗ್ರಾಂ ತೂಕದ್ದಾಗಿರುತ್ತದೆ. ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.9 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರ ಸಹಿ ಮಾಡಿರುತ್ತೇವೆ. ಸದರಿ ಗಾಂಜಾ ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 8 ಎಂದು ಗುರುತಿಸಲಾಗಿದೆ.

23. ಅವುಗಳ ಪೈಕಿ 3 ನೇ ಪ್ಯಾಕೆಟ್ ನ್ನು ತೆಗೆದು ನೋಡಲಾಗಿ ಹೂವು, ಎಲೆ, ಕಾಂಡ ಇರುವ ಗಾಂಜಾ ಮಾದಕ ವಸ್ತು ಕಂಡು ಬಂದಿದ್ದು ಸದರಿ ಪ್ಯಾಕೆಟ್ ನ್ನು ತೂಕ ಮಾಡಲಾಗಿ 25.00 ಗ್ರಾಂ ತೂಕದ್ದಾಗಿರುತ್ತದೆ. ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.10 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರ ಸಹಿ ಮಾಡಿರುತ್ತೇವೆ. ಸದರಿ ಗಾಂಜಾ ಮಾದಕ ವಸ್ತುವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 9 ಎಂದು ಗುರುತಿಸಲಾಗಿದೆ.

24. ನಂತರ 1 ನೇ ಆರೋಪಿಯು ಆ್ಯಪಲ್ ಕಂಪನಿಯ ಐಫೋನ್ ನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿ ಮೊಬೈಲ್ ಸಂಖ್ಯೆ ಮತ್ತು ಐ.ಎಂ.ಇ.ಐ. ಸಂಖ್ಯೆಗಳನ್ನು ನಮೂದಿಸಿಕೊಂಡು ಅವುಗಳನ್ನು ಕ್ಲಾತ್ ಮೋಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.11 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರ ಸಹಿ ಮಾಡಿರುತ್ತೇವೆ. (ಈ ಹಂತದಲ್ಲಿ ಸೀಲು ಮಾಡಿದ ಕ್ಲಾತ್ ಮೋಲ್ಡೆಡ್ ಕವರ್ ನ್ನು ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ಆ್ಯಪಲ್ ಕಂಪನಿಯ ಐಫೋನ್ ಇದ್ದು ಅದನ್ನು ಸಾಕ್ಷಿ ಗುರುತಿಸಿರುತ್ತಾರೆ). ಸದರಿ ಐಫೋನ್ ನ್ನು ನೋಡುತ್ತಿದ್ದು ಅದನ್ನು ಈಗ ಮುದ್ದೆ ಮಾಲು 11 ಎಂದು ಗುರುತಿಸಲಾಯಿತು. ಸದರಿ ಕ್ಲಾತ್ ಮೋಲ್ಡೆಡ್ ಕವರ್ ಗೆ ಒಂದು ಕಡೆ ಕ್ಯೂ.ಆರ್. ಕೋಡ್ ಇದ್ದು ಅದಕ್ಕೆ ನನ್ನ, ಪಂಚರ ಮತ್ತು ಆರೋಪಿತರ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಅದನ್ನು ನಿಪಿ–30 ಎಂದು ಗುರುತಿಸಲಾಯಿತು. ಸದರಿ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–30(ಎ) ಎಂದು, ಚಾಸಾ–2 ರವರ ಸಹಿಯನ್ನು ನಿಪಿ–30(ಬಿ) ಎಂದು, ಚಾಸಾ–3 ರವರ ಸಹಿಯನ್ನು ನಿಪಿ–30(ಸಿ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ–30(ಡಿ) ಎಂದು ಮತ್ತು 2 ನೇ ಆರೋಪಿಯನ್ನು ಸಹಿಯನ್ನು ನಿಪಿ–30(ಇ) ಎಂದು

ಗುರುತಿಸಲಾಯಿತು.

25. ನಂತರ 2 ನೇ ಆರೋಪಿಯು ವಿವೋ ಕಂಪನಿಯ ಮೊಬೈಲ್ ನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿ ಮೊಬೈಲ್ ಸಂಖ್ಯೆ ಮತ್ತು ಐ.ಎಂ.ಇ.ಐ. ಸಂಖ್ಯೆಗಳನ್ನು ನಮೂದಿಸಿಕೊಂಡು ಅವುಗಳನ್ನು ಕ್ಲಾತ್ ಮೊಲ್ಡೆಡ್ ಕವರ್ ಗೆ ಹಾಕಿ ಪ್ಯಾಕ್ ಮಾಡಿ ಪಿ.ಪಿ.ಎಸ್. ಎಂದು ಇರುವ ಅರಗು ಸೀಲು ಹಾಕಿ ಕ್ಯೂ.ಆರ್.ಕೋಡ್ ಇರುವ ಚೀಟಿಯನ್ನು ಅಂಟಿಸಿ ಕ್ರಮ ಸಂ.12 ಎಂದು ಗುರುತು ಸಂಖ್ಯೆಯನ್ನು ನೀಡಿ ಅದಕ್ಕೆ ನಾನು, ಪಂಚರು ಮತ್ತು ಆರೋಪಿತರ ಸಹಿ ಮಾಡಿರುತ್ತೇವೆ. (ಈ ಹಂತದಲ್ಲಿ ಸೀಲು ಮಾಡಿದ ಕ್ಲಾತ್ ಮೊಲ್ಡೆಡ್ ಕವರ್ ನ್ನು ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ವಿವೋ ಕಂಪನಿಯ ಮೊಬೈಲ್ ಇದ್ದು ಅದನ್ನು ಸಾಕ್ಷಿ ಗುರುತಿಸಿರುತ್ತಾರೆ). ಸದರಿ ವಿವೋ ಕಂಪನಿಯ ಮೊಬೈಲ್ ನ್ನು ನೋಡುತ್ತಿದ್ದು ಅದನ್ನು ಈಗ ಮುದ್ದೆ ಮಾಲು 12 ಎಂದು ಗುರುತಿಸಲಾಯಿತು. ಸದರಿ ಕ್ಲಾತ್ ಮೊಲ್ಡೆಡ್ ಕವರ್ ಗೆ ಒಂದು ಕಡೆ ಕ್ಯೂ.ಆರ್. ಕೋಡ್ ಇದ್ದು ಅದಕ್ಕೆ ನನ್ನ, ಪಂಚರ ಮತ್ತು ಆರೋಪಿತರ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಅದನ್ನು ನಿಪಿ–31 ಎಂದು ಗುರುತಿಸಲಾಯಿತು. ಸದರಿ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–31(ಎ) ಎಂದು, ಚಾಸಾ–2 ರವರ ಸಹಿಯನ್ನು ನಿಪಿ–31(ಬಿ) ಎಂದು, ಚಾಸಾ–3 ರವರ ಸಹಿಯನ್ನು ನಿಪಿ–31(ಸಿ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ–31(ಡಿ) ಎಂದು ಮತ್ತು 2 ನೇ ಆರೋಪಿಯನ್ನು ಸಹಿಯನ್ನು ನಿಪಿ–31(ಇ) ಎಂದು ಗುರುತಿಸಲಾಯಿತು.

26. ನಂತರ ಆರೋಪಿತರಿಗೆ ಸಂಬಂಧಿಸಿದ ಸದರಿ ಕಾರ್ ಸಂ.ಕೆಎ–18–ಎಂ.ಬಿ.–9898 ಪೋಕ್ಸ್ ವ್ಯಾಗನ್ ಕಾರನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿದ ಬಗ್ಗೆ ದಸ್ತಗಿರಿ ಜ್ಞಾಪನವನ್ನು ನೀಡಿರುತ್ತೇನೆ. ಸದರಿ ಜ್ಞಾಪನ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–32 ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ–32(ಎ) ಎಂದು, 2 ನೇ ಆರೋಪಿಯ ಸಹಿಯನ್ನು ನಿಪಿ–32(ಬಿ) ಎಂದು, ಸಾಕ್ಷಿಯ ಸಹಿಯನ್ನು ನಿಪಿ–32(ಸಿ) ಎಂದು ಗುರುತಿಸಲಾಯಿತು.

27. ನಂತರ ಈ ಬಗ್ಗೆ ಮಹಜರು ಕ್ರಮವನ್ನು ರಾತ್ರಿ 8 ರಿಂದ 9.15 ಗಂಟೆಯವರೆಗೆ ಮಾಡಲಾಗಿರುತ್ತದೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–33 ಎಂದು, ಸಾಕ್ಷಿಯ ಸಹಿಯನ್ನು ನಿಪಿ–33(ಎ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ–33(ಬಿ) ಎಂದು, 2 ನೇ ಆರೋಪಿಯ ಸಹಿಯನ್ನು ನಿಪಿ–33(ಸಿ) ಎಂದು, ಚಾಸಾ–14 ರವರ ಸಹಿಯನ್ನು ನಿಪಿ–33(ಡಿ) ಎಂದು, ಚಾಸಾ–2 ರವರ ಸಹಿಯನ್ನು ನಿಪಿ–33(ಇ) ಎಂದು, ಚಾಸಾ–3 ರವರ ಸಹಿಯನ್ನು ನಿಪಿ–33(ಎಫ್) ಎಂದು ಗುರುತಿಸಲಾಯಿತು. ಮಹಜರನ್ನು High masked street light ಮತ್ತು ಇಲಾಖಾ ವಾಹನದ ಹೆಡ್ ಲೈಟ್ ನ ಬೆಳಕಿನಲ್ಲಿ ತಯಾರಿಸಲಾಗಿರುತ್ತದೆ. ಮಹಜರು ಸಮಯದಲ್ಲಿ ಚಾಸಾ–8 ರವರು ಪೋಟೋಗಳನ್ನು ತೆಗೆದಿರುತ್ತಾರೆ ಮತ್ತು ವೀಡಿಯೋವನ್ನು ಮಾಡಿರುತ್ತಾರೆ. ಸದರಿ 6 ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–34 ರಿಂದ 39 ಎಂದು ಗುರುತಿಸಲಾಯಿತು. ಪೋಟೋಗಳ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ–40 ಎಂದು ಗುರುತಿಸಲಾಯಿತು. ವೀಡಿಯೋದ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ–41 ಎಂದು ಗುರುತಿಸಲಾಯಿತು.

28. ಸ್ಥಳದಲ್ಲಿದ್ದ ಚಾಸಾ–4 ಮತ್ತು 5 ರವರನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತೇನೆ.

29. ನಂತರ ಆರೋಪಿತರು, ಸ್ವತ್ತು ಹಾಗೂ ಮಹಜರಿನೊಂದಿಗೆ ಠಾಣೆಗೆ ಬಂದು ದಸ್ತಗಿರಿ ನಿಯಮವನ್ನು ಪಾಲಿಸಿ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಮರು ದಿನ ನ್ಯಾಯಾಲಯಕ್ಕೆ ಆರೋಪಿತರನ್ನು ಹಾಜರುಪಡಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಸ್ವತ್ತುಗಳ ಬಗ್ಗೆ ಸ್ವತ್ತು ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಸ್ವತ್ತುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ–42 ಎಂದು, ಸಾಕ್ಷಿಯ ಸಹಿಯನ್ನು ನಿಪಿ–42(ಎ) ಎಂದು ಗುರುತಿಸಲಾಯಿತು.

30. ಈ ದಾಳಿಯ ಬಗ್ಗೆ ಮೇಲಾಧಿಕಾರಿಗಳಿಗೆ ವಿವರವಾದ ವರದಿಯನ್ನು ಕೊಟ್ಟಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ–43 ಎಂದು, ಸಾಕ್ಷಿಯ ಸಹಿಯನ್ನು ನಿಪಿ–43(ಎ) ಎಂದು ಗುರುತಿಸಲಾಯಿತು.

31. ಮುಂದಿನ ತನಿಖೆಯನ್ನು ಚಾಸಾ–33 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಕೆ.ಎಂ.ಎನ್. ವಕೀಲರಿಂದಃ**

32. ಸಣ್ಣ ಪ್ರಮಾಣದ ಮಾದಕ ವಸ್ತುವೋ ಅಥವಾ ವಾಣಿಜ್ಯ ಪ್ರಮಾಣದ ಮಾದಕ ವಸ್ತುವೋ ಎಂಬ ಅನುಮಾನ ಇದ್ದುದರಿಂದ ಪ್ರ.ವ. ವರದಿಯನ್ನು ಎರಡು ಕಲಂಗಳಲ್ಲಿ ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–21 ರಲ್ಲಿ ಮೇಲಾಧಿಕಾರಿಗಳ ಅನುಮತಿ ಕೋರಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಮಾದಕ ವಸ್ತುಗಳನ್ನು ಹೊಂದಿಸುವ ಸಲುವಾಗಿ ಪಿ.ಎಫ್. ನ್ನು ದಿಃ 25.03.2025 ರಂದು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

33. ನಿಪಿ–43 ರಲ್ಲಿ ಹೈಡ್ರೋವಿಡ್ ಗಾಂಜಾ ವಶಪಡಿಸಿಕೊಂಡ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–8 ರವರು ಮಾತ್ರ ಫೋಟೋಗಳನ್ನು ತೆಗೆದಿರುತ್ತಾರೆ ಮತ್ತು ವೀಡಿಯೋವನ್ನು ಮಾಡಿರುತ್ತಾರೆ. ಚಾಸಾ–8 ರವರು ನಮ್ಮ ಜೀಪ್ ನಲ್ಲಿಯೇ ಬಂದಿರುತ್ತಾರೆ. ಚಾಸಾ–14 ರವರೇ ಸ್ವತಃ 1 ನೇ ಆರೋಪಿಯ ಅಂಗಶೋಧನೆ ಮಾಡಿ ಆತನ ಬಲ ಜೇಬಿನಿಂದ ಎಂ.ಡಿ.ಎಂ.ಎ. ಪಿಲ್ಸ್‌ನ್ನು ಹೊರಗೆ ತೆಗೆದಿರುತ್ತಾರೆ.

34. ಮಹಜರನ್ನು ನಾನೇ ಹೇಳಿ ಬರೆಸಿರುತ್ತೇನೆ. ಚಾಸಾ–14 ರವರು 1 ನೇ ಆರೋಪಿಯ ಶೋಧನೆ ಮಾಡಿರುವುದಿಲ್ಲ ಮತ್ತು ಚಾಸಾ–14 ರವರೇ ಮುದ್ದೆ ಮಾಲನ್ನು ಅವನ ಪ್ಯಾಂಟ್ ನ ಜೇಬಿನಿಂದ ತೆಗೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–22 ರಲ್ಲಿ ನಮೂದಿಸಿದ ಚೆಕ್ ಬಂದಿಯಲ್ಲಿರುವ ಸ್ಥಳವು ನಮ್ಮ ಠಾಣಾ ವ್ಯಾಪ್ತಿಗೆ ಬರುವುದರಿಂದ ಅದರಲ್ಲಿ ಚೆಕ್ಕು ಬಂದಿಯನ್ನು ಕಾಣಿಸಲಾಗಿರುತ್ತದೆ. ಸುಳ್ಳು ಕೇಸನ್ನು ದಾಖಲಿಸುವ ಉದ್ದೇಶದಿಂದ ನಿಪಿ–22 ರಲ್ಲಿ ಚೆಕ್ಕು ಬಂದಿಯನ್ನು ಕಾಣಿಸಲಾಗಿರುತ್ತದೆ ಎಂದರೆ ಸರಿಯಲ್ಲ.

35. ಆರೋಪಿತರು ಸದರಿ ಕಾರಿನ ಮುಂದಿನ ಸೀಟ್ ನಲ್ಲಿ ಕುಳಿತುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪ್ಲಾಸ್ಟಿಕ್ ಕವರ್ ಸಮೇತ ಮಾದಕ ವಸ್ತುವನ್ನು ತೂಕ ಮಾಡಲಾಗಿರುತ್ತದೆ. ಪ್ಲಾಸ್ಟಿಕ್ ಕವರ್ ಹೊರತುಪಡಿಸಿ ತೂಕ ಮಾಡಲು ನಮಗೆ ತೊಂದರೆ ಇರಲಿಲ್ಲ. ಮಾದಕ ವಸ್ತುವನ್ನು ಪಂಚರಿಗೆ ತೋರಿಸಲಾಗಿರುತ್ತದೆ. ಪ್ಲಾಸ್ಟಿಕ್ ಕವರ್ ಗಳಲ್ಲಿ

ಎಂ.ಡಿ.ಎಂ.ಎ. ಇರದೇ ಇದ್ದುದರಿಂದ ಮಾದಕ ವಸ್ತುವನ್ನು ಪ್ಲಾಸ್ಟಿಕ್ ಕವರ್ ಹೊರತುಪಡಿಸಿ ತೂಕ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

36. ಡಿಜಿಟಲ್ ಮಾಪನದಲ್ಲಿ ಉದ್ದನೆಯ ವಸ್ತುವನ್ನು ಇಟ್ಟು ತೂಕ ಮಾಡಬಹುದಾಗಿರುತ್ತದೆ. ಡಿಜಿಟಲ್ ತೂಕ ಮಾಪನದಲ್ಲಿ ಉದ್ದನೆಯ ಮತ್ತು ದಪ್ಪನೆಯ ವಸ್ತುವನ್ನು ಇಟ್ಟು ತೂಕ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 7 ರಿಂದ 9 ನ್ನು ಸದರಿ ಡಿಜಿಟಲ್ ಮಾಪನದಲ್ಲಿ ತೂಕ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 7 ರಿಂದ 9 ರ ಕವರ್ ನ್ನು ತೆಗೆದು ತೂಕ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಮಾದಕ ವಸ್ತುಗಳು ಆಗದೇ ಇದ್ದುದರಿಂದ ನಿಯಮಾನುಸಾರ ನಾವು ತೂಕ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

37. ಮೇಲಾಧಿಕಾರಿಗಳು ವರದಿ ಕೊಟ್ಟಾಗ ಸಂಜೆ 7.20 ರಿಂದ 7.25 ಆಗಿತ್ತು. ನಾನು ನಮ್ಮ ಮೇಲಾಧಿಕಾರಿಗಳಿಗೆ ಪತ್ರವನ್ನು ಸಂಜೆ 7.30 ಗಂಟೆಗೆ ಪತ್ರ ಬರೆದಿರುತ್ತೇನೆ ಎಂದರೆ ಸರಿಯಲ್ಲ.

ನ್ಯಾಯಾಲಯ ಸಮಯವಾಗಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.